**ಶ್ರೀ ಸೋಮಶೇಖರ್ ಎಂ.ಕೆ. :** ಮಾನ್ಯ ಅಧ್ಯಕ್ಷರೆ, KPSC ಮುಖಾಂತರ ತೆಗೆದುಕೊಂಡಂತಹ ಜೆ.ಟಿ.ಓ.ಗಳ certificate fake ಎಂದು ಬಂದಿದೆ. ಅದರ ಬಗ್ಗೆ ಸಿ.ಐ.ಡಿ. ವರದಿ ಇದೆ. ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳಬೇಕು.

**ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ :** ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯ ಏನಿದೆ, ಈಗಾಗಲೇ ಸಿ.ಐ.ಡಿ. ತನಿಖೆ ಮಾಡಿ ದಿ: 29.05.2014 ರಂದು ಸರ್ಕಾರಕ್ಕೆ ವರದಿ ನೀಡಿದೆ. ಅದನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಪೂರ್ಣ ವಿವರವನ್ನು ಮಾನ್ಯ ಶಾಸಕರಿಗೆ ಒದಗಿಸುತ್ತೇನೆ.

**ಅಧ್ಯಕ್ಷರು :** ಮುಂದಿನ ಕ್ರಮ ಏನು ಎಂದು ಕೇಳುತ್ತಿದ್ದಾರೆ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ: ಮೊನ್ನೆ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ವರದಿಯನ್ನು ಅಧ್ಯಯನ ಮಾಡಿ ಯಾರು ತಪ್ಪಿತಸ್ಥರಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

**ಅಧ್ಯಕ್ಷರು :** ಪ್ರಶ್ನೋತ್ತರ ಅವಧಿ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಮತ್ತು ಪಶುಸಂಗೋಪನಾ ಸಚಿವರು) :** ಮಾನ್ಯ ಅಧ್ಯಕ್ಷರೆ, ದಿನಾಂಕ: 23.06.2014 ರ 1ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 60 ಪ್ರಶ್ನೆಗಳ ಪೈಕಿ 56 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಅಧ್ಯಕ್ಷರು :** ಮಂಡಿಸಲಾಗಿದೆ. ಈಗ ಸದನವನ್ನು ಮುಂದೂಡಿ ಮಧ್ಯಾಹ್ನ 03.45 ಗಂಟೆಗೆ ಪುನಃ ಸೇರುವುದು.

(ಅನುಬಂಧ – 1)

(ಮಧ್ಯಾಹ್ನ 02 ಗಂಟೆ 38 ನಿಮಿಷಕ್ಕೆ ಸದನವನ್ನು ಮುಂದೂಡಿ ಪುನ: ಮಧ್ಯಾಹ್ನ 3 ಗಂಟೆ 45 ನಿಮಿಷಕ್ಕೆ ಸೇರಲು ನಿರ್ಧರಿಸಲಾಯಿತು)

(ಸದನವು ಭೋಜನ ವಿರಾಮದ ನಂತರ 3.00 ಗಂಟೆ 58 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)